ವಿನ್ಯಾಸ ಅನುಮೋದನೆ/ಉಪವಿಭಜನೆಯ ವಿಧಾನ

1. ಕಾನೂನಿನ ಪ್ರಕಾರ ಜಮೀನಿನ ಮಾಲೀಕ್ವ ಹೊಂದಿದ ಕೃಷಿಯೇತರ ಉದ್ದೇಶಕ್ಕೆ ಭೂ-ಪರಿವರ್ತನೆಯಾಗಿರುವ ಜಮೀನಿನ ಮಾಲೀಕನು ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಯ ಪರಿಗಣನೆಗೆ ಅರ್ಜಿ ಸಲ್ಲಿಸಬೇಕು.
2. ಸಂಬಂಧಿಸಿದ ಸ್ಥಳೀಯ ಸಂಸ್ಥೆಯು, ದಾಖಲೆಗಳನ್ನು ಪರಿಶೀಲಿಸಿದ ನಂತರ ಅರ್ಜಿಯನ್ನು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ವಿನ್ಯಾಸದ ತಾಂತ್ರಿಕ ಅನುಮೋದನೆಗಾಗಿ ಕಳುಹಿಸಬೇಕು.
3. ದಾಖಲೆಗಳನ್ನು ಪರಿಶೀಲಿಸಿದ ನಂತರ, ಅಗತ್ಯ ಮಾಹಿತಿ/ದಾಖಲೆಗಳ ಅಗತ್ಯತೆಯಿದ್ದಲ್ಲಿ ಅರ್ಜಿದಾರರು ಯೋಜನಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು.
4. ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ವಿಷಯವನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬೇಕು.
5. ಸಭೆಯ ಆಡಳಿತಾತ್ಮಕ ಮಂಜೂರಾತಿ ಪಡೆದ ನಂತರ ಅರ್ಜಿದಾರರು ನಿಗಧಿತ ಶುಲ್ಕ ಪಾವತಿಸಿದ ನಂತರ ಪ್ರಾದಿಕಾರವು ಕೆಲವೊಂದು ಷರತ್ತುಗಳೊಂದಿಗೆ ಹಾಗೂ ಸರ್ಕಾರದ ಸುತ್ತೋಲೆಗಳ ಪ್ರಕಾರ ಪ್ರಾಧಿಕಾರದಿಂದ ವಿನ್ಯಾಸಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015 ಸೆಕ್ಷನ್ 17(2A) ಪ್ರಕಾರ ಭೂಮಿಯ ಮೇಲೆ ಗುರುತಿಸುವ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ತಾತ್ಕಾಲಿಕ ವಿನ್ಯಾಸಕ್ಕೆ ಅನುಮೋದನೆ ನೀಡಲಾಗುತ್ತದೆ.
6. ಉಪವಿಭಜನೆನಕ್ಷೆಗೆ ಮಾರ್ಪಾಡು/ಪರಿಷ್ಕರಣೆ ಅಗತ್ಯವಿದ್ದಲಿ, ಅರ್ಜಿದಾರನು ಅಂತಹ ಮಾರ್ಪಾಡು/ಪರಿಷ್ಕರಣೆಯೊಂದಿಗೆ, ಅಗತ್ಯ ದಾಖಲೆಗಳೊಂದಿಗೆ ಸ್ಥಳೀಯ ಸಂಸ್ಥೆ ಮುಖಾಂತರ ಅರ್ಜಿ ಸಲ್ಲಿಸಬೇಕು.
7. ಅನುಮೋದಿತ ತಾತ್ಕಾಲಿಕ ವಿನ್ಯಾಸದಂತೆ ಅಭಿವೃದ್ಧಿಪಡಿಸಿದ ನಂತರ ಅರ್ಜಿದಾರರು ಅಂತಿಮ ವಿನ್ಯಾಸಕ್ಕೆ ಅನುಮೋದನೆ ಪಡೆಯಲು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಪ್ರಮಾಣಪತ್ರಗಳನ್ನು ಪಡೆದು ಸಲ್ಲಿಸಿದ ನಂತರ ಹಾಗೂ ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಿದ ನಂತರ, ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಪ್ರಾಧಿಕಾರದ ಸಭೆಯ ತೀರ್ಮಾನದಂತೆ ನಾಗರಿಕ ಸೌಲಭ್ಯದ ನಿವೇಶನವನ್ನು ಯೋಜನಾ ಪ್ರಾಧಿಕಾರಕ್ಕೆ ಮತ್ತು ರಸ್ತೆ, ಉದ್ಯಾನವನ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಉಚಿತವಾಗಿ ಹಸ್ತಾಂತರಿಸಿಕೊಂಡು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015 ಸೆಕ್ಷನ್ 17(2B)ಪ್ರಕಾರ ಅಂತಿಮ ವಿನ್ಯಾಸ ಅನುಮೋದನೆಯನ್ನು ನೀಡಲಾಗುವುದು.

ವಿನ್ಯಾಸ ಅನುಮೋದನೆಗೆ ಸಲ್ಲಿಸಬೇಕಾದ ದಾಖಲೆಗಳ ಪಟ್ಟಿ

1. ಕ್ರಯ ಪತ್ರ, ಸಾಲು ವಿಭಾಗಪತ್ರ,ಇತೀಚಿನ ಇಸಿ, ನಮೂನೆ-15ಮತ್ತು16
2. ಇತ್ತೀಚಿನ ಆರ್‌ಟಿಸಿ(ಪಹಣಿ), ಮ್ಯುಟೇಶನ್ ಪ್ರತಿ, ಪ್ರಸ್ತಾಪಿತ ಜಮೀನಿನ ಖಾತಾ ಪ್ರತಿ, (ಯಾವುದಾದರೂ ಇದ್ದಲ್ಲಿ)
3. ಎಲ್ಲಾ ಬದಿಗಳ ಅಳತೆಗಳುಳ್ಳ ಮೂಲ ಸರ್ವೆಸ್ಕೆಚ್, (ಜಮೀನಿನ ಗ್ರಾಮ ನಕ್ಷೆ-ಸಂಬಂಧಿಸಿ ಪ್ರಾಧಿಕಾರದಿಂದ ದೃಢೀಕರಿಸಿದ್ದು)
4. ಪ್ರಶ್ನಿತ ಜಮೀನಿನ ಅಂಚಿನಿಂದ 100 ಮೀ ವರೆಗಿನ ವಿವರಗಳನ್ನು ತೋರಿಸುವ ಟೋಟಲ್ ಸ್ಟೇಷನ್ ವಿಧಾನದಿಂದ ತಯಾರಿಸಲಾದ ಸ್ಥಳ ನಕ್ಷೆ.
5. ಸಂಪರ್ಕ ರಸ್ತೆ ಬಗ್ಗೆ ದಾಖಲೆ, ರಸ್ತೆ ವರ್ಗ, ಅಗಲ ಇತ್ಯಾದಿ.
6. ಕಂದಾಯ ಇಲಾಖೆಯಿಂದ ಹೊರಡಿಸಲಾದ ಧೃಢೀಕೃತ ಭೂ-ಪರಿವರ್ತನೆ ಆದೇಶ.
7. ಅನುಮೋದಿತ ವಲಯ ನಿಯಮಾವಳಿಗಳ ಕರಡು ಪ್ರತಿ.
8. ಜಮೀನಿನ ವಿಸ್ತೀರ್ಣವು 10.0 ಎಕರೆಗೆ ಮೇಲ್ಪಟ್ಟಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ನಿರಾಕ್ಷೇಪಣಾ ಪತ್ರ.